No. ED/KEA/UGCET/2026 (Agri-Veterinary) Date: 14-11-2026

UGCET-2026 – B.Sc. Agriculture etc and Veterinary courses Special Round Seat Allotment

ಯುಜಿಸಿಇಟಿ–2026 – ಕೃಷಿ ವಿಜ್ಞಾನ ಮುಂತಾದ ಮತ್ತು ವೆಟರಿನರಿ ಕೋರ್ಸುಗಳ ಪ್ರವೇಶಾತಿಗೆ ವಿಶೇಷ ಸುತ್ತಿನ ಸೀಟು ಹಂಚಿಕೆ

Schedule - ವೇಳಾಪಟ್ಟಿ

Sl. No.	Particulars	Date and Time
01	ಸೀಟ್ ಮ್ಯಾಟ್ರಿಕ್ಸ್ ಪ್ರಕಟಣೆ Display of Seat Matrix	16-11-2026 – after 1.00 pm
02	Advance amount payment Rs.35,000/- (all category candidates) ಮುಂಗಡ ಮೊತ್ತ ಪಾವತಿಸುವುದು Rs.35,000/- (ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ)	17-11-2026 to 18-11-2026 (during banking hours)
03	Option Entry by Eligible Candidates ಇಚ್ಛೆ / ಆಯ್ಕೆಗಳನ್ನು ಹೊಸದಾಗಿ ದಾಖಲಿಸುವುದು.	From 11.00 am on 17-11-2026 to 19-11-2026 – 10.00 am
04	Publication of Provisional Seat Allotment Results ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಪ್ರಕಟಣೆ	19-11-2026 – after 5.00 pm
05	Publication of Seat Allotment Final Results ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಣೆ	20-11-2026 – after 10.00 am
06	Payment of Fees and Downloading of Confirmation Slip by the seat allotted candidates ಸೀಟು ಹಂಚಿಕೆ ಮಾಡಿದ ಅಭ್ಯರ್ಥಿಗಳು ಶುಲ್ಕ ಪಾವತಿ ಮಾಡುವುದು ಮತ್ತು Confirmation Slip Download ಮಾಡುವುದು	20-11-2026 to 21-11-2026
07	Last date for reporting to college along with all original documents. ಎಲ್ಲಾ ಧೃಡೀಕರಿಸಿದ ದಾಖಲಾತಿಗಳೊಂದಿಗೆ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ.	21-11-2026 – 5.30 pm

Executive Director.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ/2026(ಕೃ.ವಿ./ಪವೈ) ದಿನಾಂಕ: 14–11–2026

ಕೃಷಿ ವಿಜ್ಞಾನ ಮುಂತಾದ ಮತ್ತು ವೆಟರಿನರಿ ಸೀಟುಗಳ ಕೋರ್ಸುಗಳ ಪ್ರವೇಶಾತಿಗೆ ಹಂಚಿಕೆ – ಯುಜಿಸಿಇಟಿ–2026

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಪಶು ವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ಉಳಿದಿರುವ ಸೀಟುಗಳಿಗೆ ಮತ್ತೊಂದು ಸುತ್ತಿನ ಸೀಟು ಹಂಚಿಕೆಯನ್ನು ಮಾಡಲು ಕೋರಿರುತ್ತಾರೆ. ಈ ಹಿನ್ನಲೆಯಲ್ಲಿ ಸದರಿ ಸೀಟುಗಳ ಜೊತೆಯಲ್ಲಿ ಈ ಹಿಂದಿನ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ / ಕಾಲೇಜಿಗೆ ಪ್ರವೇಶ ಪಡೆಯದೆ ಇರುವ / **ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ ಹಾಗು ವೆಟರಿನರಿ ಕೋರ್ಸುಗಳ ಪ್ರವೇಶಾತಿಗೆ ಸೀಟು ಹಂಚಿಕೆಯನ್ನು ಪ್ರತ್ಯೇಕವಾಗಿ ಪ್ರಕಟಿಸಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು.**

ಕಾಲೇಜುವಾರು, ಕೋರ್ಸುವಾರು ಮತ್ತು ಪ್ರವರ್ಗವಾರು ಸೀಟ್ ಮ್ಯಾಟ್ರಿಕ್ಸ್ ಅನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಅರ್ಹತೆ:

1. **"ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ"** ಕೋರ್ಸಿಗೆ ಹಂಚಿಕೆ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಂಡಿರುವ ಅಭ್ಯರ್ಥಿಗಳು **"ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ** ಕೋರ್ಸಿಗೆ ಅರ್ಹತೆ ಪಡೆಯುವುದಿಲ್ಲ.
2. **"ವೆಟರಿನರಿ"** ಕೋರ್ಸಿಗೆ ಹಂಚಿಕೆ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಂಡಿರುವ ಅಭ್ಯರ್ಥಿಗಳು **"ವೆಟರಿನರಿ" ಕೋರ್ಸಿಗೆ** ಅರ್ಹತೆ ಪಡೆಯುವುದಿಲ್ಲ.
3. ವೈದ್ಯಕೀಯ ಅಥವಾ ದಂತ ವೈದ್ಯಕೀಯ ಅಥವಾ ಆಯುಷ್ ಕಾಲೇಜುಗಳಿಗೆ ಸೇರಿರುವ ಅಭ್ಯರ್ಥಿಗಳು ಹಾಗೂ 4ನೇ ಸುತ್ತು ಮತ್ತು ನಂತರದ ವೈದ್ಯಕೀಯ ಅಥವಾ ದಂತ ವೈದ್ಯಕೀಯ ಸುತ್ತುಗಳಲ್ಲಿ ಸೀಟು ಹಂಚಿಕೆ ಮಾಡಿಕೊಂಡವರು ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹತೆ ಇರುವುದಿಲ್ಲ.
4. ಇತರೆ ಅಭ್ಯರ್ಥಿಗಳು **"ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ ಹಾಗು ವೆಟರಿನರಿ"** ಸೀಟುಗಳಲ್ಲಿ ಆಸಕ್ತಿ ಇದ್ದಲ್ಲಿ, **ಪೋಷಕರೊಡನೆ ಚರ್ಚಿಸಿ, ಪೋಷಕರ ಸ್ಪಷ್ಟ ನಿರ್ದೇಶನದಂತೆ, ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಸಂಬಂಧಿಸಿದ ಕಾಲೇಜಿನಿಂದ ಕಡ್ಡಾಯವಾಗಿ NOC ಪಡೆದು ನಂತರ Options Entry ಮಾಡಲು ಸೂಚಿಸಿದೆ.** ಏಕೆಂದರೆ, ಈ ಸುತ್ತಿನಲ್ಲಿ ಸೀಟು ಹಂಚಿಕೆಯಾದ ನಂತರ ಈ ಹಿಂದೆ ಪಡೆದಿದ್ದ ಸೀಟು ರದ್ದುಗೊಳ್ಳುತ್ತದೆ ಮತ್ತು ಯಾವುದೇ ಕಾರಣಕ್ಕೂ ಅವರುಗಳು ಹಳೆಯ ಸೀಟನ್ನು ಮರಳಿ ಪಡೆಯಲು ಆಗುವುದಿಲ್ಲ. ಈ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು.

ಮುಂಗಡ ಶುಲ್ಕ ಪಾವತಿ:

5. **"ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ ಹಾಗು ವೆಟರಿನರಿ ಕೋರ್ಸುಗಳ ಸೀಟು ಹಂಚಿಕೆಗೆ ಭಾಗವಹಿಸಲು ಎಲ್ಲಾ ವರ್ಗದ ಅಭ್ಯರ್ಥಿಗಳು ಮುಂಗಡವಾಗಿ ರೂ.35,000/– ಪಾವತಿಸಬೇಕು. ಈ ಹಿಂದೆ ಹಂಚಿಕೆಯಾಗಿದ್ದ ಸೀಟಿಗೆ ಪಾವತಿಸಿರುವ ಶುಲ್ಕವನ್ನು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.** ಈ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿ ಅಭ್ಯರ್ಥಿಯು ಉಳಿದ ಶುಲ್ಕವನ್ನು ಪಾವತಿಸಲು ಅಥವಾ ಕಾಲೇಜಿಗೆ ಪ್ರವೇಶ ಪಡೆಯಲು ವಿಫಲನಾದಲ್ಲಿ, ಅಭ್ಯರ್ಥಿಯು ಪಾವತಿಸಿದ್ದ **ರೂ.35,000/–** ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ನಿಯಮಾನುಸಾರ ಅಭ್ಯರ್ಥಿಯು ದಂಡವನ್ನು ಪಾವತಿಸಬೇಕು. ದಂಡ ಪಾವತಿಸುವ ಕುರಿತು ಪ್ರಕಟಣೆಯನ್ನು ನೀಡಲಾಗಿದೆ.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

ಸೀಟು ಹಂಚಿಕೆಯ ನಂತರ ಶುಲ್ಕ ಪಾವತಿ:

ಇತರೆ ಕೋರ್ಸುಗಳಿಗೆ ಪಾವತಿಸಿದ ಶುಲ್ಕವನ್ನು ಈ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ ಹೊಂದಾಣಿಕೆ ಮಾಡಲಾಗುವುದಿಲ್ಲ. ಅಭ್ಯರ್ಥಿಯು ಹೊಸದಾಗಿ ಶುಲ್ಕವನ್ನು ಪಾವತಿಸಬೇಕು. **ರೂ.35,000/- ಮುಂಗಡ ಪಾವತಿಯನ್ನು ಸೀಟಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.**

ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು:

ಈ ಸುತ್ತಿನಲ್ಲಿ ಅಭ್ಯರ್ಥಿಗಳು ***ಬಿಎಸ್‌ಸಿ ಕೃಷಿ ವಿಜ್ಞಾನ ಮುಂತಾದ ಹಾಗು ವೆಟರಿನರಿ*** ಕೋರ್ಸುಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಗಳನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ ಆಪ್ಷನ್‌ಗಳನ್ನು ಪರಿಗಣಿಸಲಾಗುವುದಿಲ್ಲ. (ವೇಳಾಪಟ್ಟಿಯ ಅನುಸಾರ)

ಸೂಚನೆಗಳು:

1. ನಿಗದಿತ ದಿನಾಂಕ ಮತ್ತು ಸಮಯದೊಳಗೆ ಹೊಸದಾಗಿ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯಲು ಪ್ರಸ್ತುತ ಕಾಲೇಜಿನಿಂದ ಮೂಲ ದಾಖಲೆಗಳನ್ನು ಪಡೆಯುವ ಜವಾಬ್ದಾರಿಯು ಅಭ್ಯರ್ಥಿಗಳದ್ದಾಗಿರುತ್ತದೆ.
2. ಅಭ್ಯರ್ಥಿಗಳು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ಹಂಚಿಕೆ ಮಾಡಿಕೊಂಡ ಕಾಲೇಜಿಗೆ ಕಡ್ಡಾಯವಾಗಿ ವರದಿ ಮಾಡಿಕೊಳ್ಳಬೇಕು. ಅಭ್ಯರ್ಥಿಯು ನಿಗದಿಪಡಿಸಿದ ಕಾಲೇಜಿಗೆ ವರದಿ ಮಾಡಲು ವಿಫಲವಾದರೆ ಅವರು ಯಾವುದೇ ಸೀಟನ್ನು ಹೊಂದಿರುವುದಿಲ್ಲ. ಅಂತಹ ಅಭ್ಯರ್ಥಿಗಳೂ ಎರಡೂ ಸೀಟುಗಳನ್ನು ಕಳೆದುಕೊಳ್ಳುತ್ತಾರೆ ಮತ್ತು ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಕಡ್ಡಾಯವಾಗಿ ನಿಗದಿಪಡಿಸಿದ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು.

ಸೀಟುಗಳ ಲಭ್ಯತೆ:

1. ಸೀಟುಗಳ ಲಭ್ಯತೆಗಾಗಿ ಅಭ್ಯರ್ಥಿಗಳು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟಿಗೆ ಭೇಟಿ ನೀಡುತ್ತಿರಲು ಸೂಚಿಸಿದೆ. ಸೀಟು ಹಂಚಿಕೆಗೆ ಮೊದಲು ಯಾವುದಾದರು ಸೀಟುಗಳು ರದ್ದಾದಲ್ಲಿ / ಖಾಲಿ ಇದ್ದಲ್ಲಿ ಅಂತಹ ಸೀಟುಗಳನ್ನೂ ಹಂಚಿಕೆಗೆ ಪರಿಗಣಿಸಲಾಗುವುದು; ಆದ್ದರಿಂದ
2. ಅರ್ಹ ಆಸಕ್ತ ಅಭ್ಯರ್ಥಿಗಳು ಸೀಟು ಹಂಚಿಕೆಯಾದಲ್ಲಿ ಕಾಲೇಜಿಗೆ ಸೇರಬಯಸುವಂತಹ (ಸೀಟ್ ಮ್ಯಾಟ್ರಿಕ್ಸ್ ನಲ್ಲಿ ತೋರಿಸದೇ ಇರುವ) ಎಲ್ಲಾ OPTIONS ನಮೂದಿಸಬಹುದಾಗಿದೆ.

ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು